## **ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ. ಸಂಖ್ಯೆ 220/2024**

| | | |
|---|---|---|
| **ಸಾಕ್ಷಿದಾರರ ಹೆಸರು** | : ಧರ್ಮೇಂದರ್ ಎಸ್ | ಪ್ರಾ.ಸಾ. 1 |
| **ತಂದೆಯ / ಗಂಡನ ಹೆಸರು** | : ಲೇಃ ಸುಭಾಷ್ ಚಂದ್ | ಪಿಡಬ್ಲ್ಯೂ 1 |
| **ವಯಸ್ಸು** | : 43 ವರ್ಷ | |
| **ಉದ್ಯೋಗ** | : ಅಮೃತ್ ಗೋಲ್ಡ್ ಮತ್ತು ಸಿಲ್ವರ್ ಪ್ಯಾಲೇಸ್ ಚಿನ್ನದ ಅಂಗಡಿಯ ಮಾಲೀಕರು | |
| **ವಾಸಸ್ಥಳ** | : ವಿದ್ಯಾರಣ್ಯಪುರಂ, ಮೈಸೂರು. | |

**ದಿಃ 23.03.2022 ರ ಈ ನ್ಯಾಯಾಲಯದ ಆದೇಶದಂತೆ ಪಿ ಎಫ್ ನಂ. 58/2021, ಪಿ ಎಫ್ ನಂ. 59/2021, ಪಿ ಎಫ್ ನಂ. 72/2021, ಪಿ ಎಫ್ ನಂ. 71/2021, ಮತ್ತು ಪಿ ಎಫ್ ನಂ. 105/2021 ರ ಅಡಿಯಲ್ಲಿ ಅಮಾನತ್ತು ಪಡಿಸಿಕೊಳ್ಳಲಾಗಿರುವ ಮಾಲುಗಳನ್ನು ದೂರುದಾರರ ಮಧ್ಯಂತರ ಸುಪರ್ದಿಗೆ ನೀಡುವ ಸಲುವಾಗಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಗುತ್ತಿದೆ.**

**ಸಾಕ್ಷಿಯನ್ನು ಈ ದಿನ ದಿಃ13.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಕರಿಂದ ಃ**

1. ನಾನು 2011 ರಿಂದ ಜ್ಯೂವೆಲ್ಲರಿ ಶಾಪ್ ನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ನನ್ನ ಅಂಗಡಿಯ ಹೆಸರು ಅಮೃತ್ ಗೋಲ್ಡ್ ಅಂಡ್ ಸಿಲ್ವರ್ ಪ್ಯಾಲೇಸ್

ಎಂದು. ಸದರಿ ಅಂಗಡಿಯು ವಿದ್ಯಾರಣ್ಯಪುರಂ ದ 16 ನೇ ಕ್ರಾಸ್, 4 ನೇ ಮೇನ್ ನಲ್ಲಿ ಇರುತ್ತದೆ. ಚಾಸಾ.5 ರವರು ನನ್ನ ಚಿಕ್ಕಪ್ಪ. ಚಾಸಾ.6 ನನ್ನ ತಮ್ಮ. ಚಾಸಾ.7 ನನ್ನ ತಾಯಿ.

2. ಸಾಮಾನ್ಯವಾಗಿ ಅಂಗಡಿಯನ್ನು ಬೆಳಿಗ್ಗೆ 10.00 ಗಂಟೆಗೆ ತೆರೆದು ವ್ಯಾಪಾರ ಪ್ರಾರಂಬಿಸಿ ರಾತ್ರಿ 09.00 ಗಂಟೆಗೆ ಮುಚ್ಚುತ್ತೇವೆ. ನನ್ನ ಅಂಗಡಿಯಲ್ಲಿ ಸಹಾಯಕ್ಕೆಂದು ಯಾರು ಇಲ್ಲ. ನನ್ನ ಹೆಂಡತಿ ಸ್ವಲ್ಪ ಸಹಾಯ ಮಾಡುತ್ತಿದ್ದು , ನನ್ನ ಚಿಕ್ಕಪ್ಪ ಚಾಸಾ.5 ರವರು ಸಂಜೆ 5 ರ ನಂತರ ಬಂದು ಸ್ವಲ್ಪ ಸಹಾಯ ಮಾಡುತ್ತಾರೆ. ನಾನು ನಮ್ಮ ಅಂಗಡಿಯಲ್ಲಿ ಚಿನ್ನದ ಆಭರಣಗಳಾದ ಚಿನ್ನದ ಓಲೆ , ಉಂಗುರ, ನೆಕ್ಲೇಸ್ , ಚೈನ್ , ಬಳೆ , ಕರಿಮಣಿ ಸರ, ಹ್ಯಾಂಗಿಂಗ್ಸ್ ಹಾಗೂ ಚಿಕ್ಕ ಪುಟ್ಟ ಆಭರಣಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತೇನೆ. ಚಿನ್ನದ ಜೊತೆಗೆ ಬೆಳ್ಳಿ ಪದಾರ್ಥಗಳನ್ನು ಸಹ ಮಾರಾಟ ಮಾಡುತ್ತೇವೆ.

3. ದಿ.23.08.2021 ರಲ್ಲಿ ಬೆಳಿಗ್ಗೆ 10.00-10.15 ಗಂಟೆಗೆ ಅಂಗಡಿಯನ್ನು ತೆರೆದಿರುತ್ತೇನೆ. ನಂತರ ಅಂದಾಜು 15 ನಿಮಿಷದ ಬಳಿಕ ನನ್ನ ಹೆಂಡತಿ ನಮ್ಮ ಮಕ್ಕಳಿಗೆ ಆರೋಗ್ಯ ಸರಿ ಇಲ್ಲ ಎಂದು ಹೇಳಿ ಮಕ್ಕಳನ್ನು ಕರೆದುಕೊಂಡು ಅಂಗಡಿ ಬಂದಿದ್ದರು. ನಂತರ ನಾನು ಅಂಗಡಿಯನ್ನು ಮುಚ್ಚಿ ಅವರನ್ನು ನಂಜು ಮಳಿಗೆಯಲ್ಲಿರುವ ವಾತ್ಸಲ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಆಸ್ಪತ್ರೆಯಿಂದ ಮದ್ಯಾಹ್ನ 02.00-02.15 ರ ಸುಮಾರಿಗೆ ಮತ್ತೆ ಅಂಗಡಿಗೆ ವಾಪಾಸ್ ಬಂದು ಅಂಗಡಿಯನ್ನು ತೆರೆದಿರುತ್ತೇನೆ. ಆಗ ಒಂದೆರೆಡು ಜನ ಗಿರಾಕಿಗಳು ಬಂದಿದ್ದು , ಅವರನ್ನು **attend** ಮಾಡಿರುತ್ತೇನೆ. ನಂತರ 03.00-03.30 ರ ಸುಮಾರಿಗೆ ನನ್ನ ಹೆಂಡತಿ ನನಗೆ ತಿಂಡಿಯನ್ನು ತೆಗೆದುಕೊಂಡು ಅಂಡಿಗೆ ಬಂದರು. ಹತ್ತು ನಿಮಿಷದ ಬಳಿಕ ಅವರು ವಾಪಾಸ್ ಹೊರಟು

ಹೋಗಿರುತ್ತಾರೆ. ನಂತರ ಒಬ್ಬ ಗಿರಾಕಿ ಒಂದು ಬೆಳ್ಳಿಯ ಸಾಮಾನನ್ನು ಖರೀದಿ ಮಾಡಿಕೊಂಡು ಹೋಗಿರುತ್ತಾರೆ.

4. ನಂತರ 04.30 ರ ಸುಮಾರಿಗೆ ಚಿನ್ನದ ಆಚಾರಿ ಗಂಗಾ ಎನ್ನುವವರು ನನ್ನ ಅಂಗಡಿಗೆ ಬಂದು ಕೆಲವು ಚಿನ್ನದ ಅಭರಣಗಳನ್ನು ನೀಡಿ ನಂತರ 04.45 ರ ಸುಮಾರಿಗೆ ಅಂಗಡಿಯಿಂದ ಹೊರಟು ಹೋದರು.

5. ಆಗ ಅಂಗಡಿಯಲ್ಲಿ ನಾನು ಒಬ್ಬನೇ ಇದ್ದೆ. ಆ ಸಮಯದಲ್ಲಿ ಅಂದಾಜು ಸಂಜೆ 05.00 ಸುಮಾರಿಗೆ ಮೊದಲಿಗೆ (ನ್ಯಾಯಾಲಯದಲ್ಲಿ ವಿಸಿ ಟಿವಿ ಯಲ್ಲಿ ನಾಸಿಕ್ ಜೈಲ್ ನಿಂದ ಹಾಜರಾದ 2 ನೇ ಆರೋಪಿ ರವರನ್ನು ತೋರಿಸಿ, ಆರೋಪಿಯ ಹೆಸರು ನನಗೆ ತಿಳಿದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ) ಆರೋಪಿ–2 ರವರು ಬರ್ಮೋಡಾ ಮತ್ತು ಟೀ ಶರ್ಟ್ ನಲ್ಲಿ ಅಂಗಡಿಗೆ ಬಂದಿರುತ್ತಾರೆ. ಆತನ ಹಿಂದೆಯೇ ಸ್ವಲ್ಪ ಅಂತರದಲ್ಲಿ (ನ್ಯಾಯಾಲಯದಲ್ಲಿ ವಿಸಿ ಟಿವಿ ಯಲ್ಲಿ ಮೈಸೂರು ಜೈಲ್ ನಿಂದ ಹಾಜರಾದ 3 ನೇ ಆರೋಪಿ ನ್ನು ತೋರಿಸಿ, ಆರೋಪಿಯ ಹೆಸರು ನನಗೆ ತಿಳಿದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ) 3 ನೇ ಆರೋಪಿ ಬಂದನು. ನಂತರ 2 ನೇ ಆರೋಪಿ ನನಗೆ ಒಂದು ಬ್ರಾಸ್ಲೇಟ್ ಕೇಳಿದನು. ಆತ ಉರ್ದು ಮಿಶ್ರಿತ ಹಿಂದಿ ಭಾಷ್ಷೆಯಲ್ಲಿ ಬ್ರಾಸ್ಲೇಟ್ ಹೇ ಕ್ಯಾ ಎಂದು ಕೇಳಿರುತ್ತಾನೆ. ನಾನು ಆತನಿಗೆ **display** ನಲ್ಲಿ ಇಟ್ಟಿದ್ದ ಬ್ರಾಸ್ಲೇಟ್ ಗಳನ್ನು ತೋರಿಸುತ್ತಿದ್ದೆನು. ಅಷ್ಟರಲ್ಲಿ ಇನ್ನೊಬ್ಬ ವ್ಯಕ್ತಿ ಸ್ವಲ್ಪ ವಯಸ್ಸಾದಂತೆ ಇದ್ದು , ಆತನೂ ಕೂಡ ಅಲ್ಲಿಗೆ ಬಂದಿರುತ್ತಾನೆ. ಮೊದಲಿಗೆ ಬಂದ ಆರೋಪಿತರು ಕುಳಿತಿದ್ದ ಚೇರ್ ನ ಹಿಂದುಗಡೆ ಚೇರ್ ನಲ್ಲಿ ಸದರಿ ವಯಸ್ಸಾದ ವ್ಯಕ್ತಿ ಬಂದು ಕುಳಿತುಕೊಳ್ಳುತ್ತಾನೆ. ಅಷ್ಟರಲ್ಲಿ ಇನ್ನೊಬ್ಬ ವ್ಯಕ್ತಿ ಒಳಗಡೆ ಬಂದಿರುತ್ತಾನೆ. (ನ್ಯಾಯಾಲಯದಲ್ಲಿ ವಿಸಿ ಟಿವಿ ಯಲ್ಲಿ ಮೈಸೂರು ಜೈಲ್ ನಿಂದ

ಹಾಜರಾದ 1 ನೇ ಆರೋಪಿ ನ್ನು ತೋರಿಸಿ, ಆರೋಪಿಯ ಹೆಸರು ನನಗೆ ತಿಳಿದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ) 1 ನೇ ಆರೋಪಿ ಬಂದನು. ಆತ ಒಳಗಡೆ ಬಂದ ತಕ್ಷಣ , ಅಲ್ಲಿಯೇ ಕೂತ್ತಿದ್ದ ವಯಸ್ಸಾದಂತಹ ವ್ಯಕ್ತಿ ಎದ್ದು ಅಂಗಡಿಯ ಶಟ್ಟರ್ ನ್ನು ಮುಚ್ಚುತ್ತಾನೆ. ಆಗ ನಾನು ಬ್ರಾಸ್ಲೇಟ್ ತೋರಿಸುತ್ತಿದ್ದ ವ್ಯಕ್ತಿ (2 ನೇ ಆರೋಪಿ) ನನ್ನ ತಲೆ ಕೂದಲನ್ನು ಹಿಡಿದ ಬಗ್ಗಿಸಿ ನನ್ನ ತಲೆಗೆ ಹೊಡೆದಿರುತ್ತಾನೆ. ನಂತರ ಆತನ ಪಕ್ಕದಲ್ಲಿಯೇ ಇದ್ದ ವ್ಯಕ್ತಿ (3 ನೇ ಆರೋಪಿ) ನನಗೆ ತಲೆಗೆ ಹೊಡೆದು , ತನ್ನ ಬಳಿಯಿದ್ದ ಪಿಸ್ತೂಲ್ ನ್ನು ನನ್ನ ತಲೆಗೆ ಗುರಿ ಮಾಡಿ ಹಿಡಿದುಕೊಂಡನು.

6. ನಂತರ ನಾನು ಆ ಇಬ್ಬರನ್ನು (2 ಮತ್ತು 3 ನೇ ಆರೋಪಿತರನ್ನು) ತಳ್ಳಿ , ತಪ್ಪಿಸಿಕೊಳ್ಳಲು ಪ್ರಯತ್ನಿಸಿರುತ್ತೇನೆ. ಆಗ ಅಲ್ಲಿಯೇ ಇದ್ದ ಇನ್ನೊಬ್ಬ ಆಸಾಮಿ (1 ನೇ ಆರೋಪಿ) ಕೌಂಟರ್ ಸುತ್ತಿ ನನ್ನನ್ನು ಹಿಡಿದುಕೊಂಡ ಸ್ಥಳಕ್ಕೆ ಬಂದನು. ಆಗ ನನ್ನ ಮುಂದೆ ಇದ್ದ, (2 ನೇ ಆರೋಪಿ) ಕೌಂಟರ್ ನ ಗ್ಲಾಸ್ ಮೇಲ್ ಹತ್ತಿ ನನ್ನ ಕಡೆ ಬಂದು 2 ನೇ ಆರೋಪಿ ಮತ್ತು 1 ನೇ ಆರೋಪಿ ನನ್ನನು ಕೆಳಗಡೆ ಬೀಳಿಸಿ, ನನ್ನ ಕೈ ಕಾಲುಗಳನ್ನು ಹಗ್ಗದಿಂದ ಕಟ್ಟಿರುತ್ತಾರೆ. ಅವರ ಬಳಿ ಇದ್ದ ಬಟ್ಟೆಯನ್ನು ನನ್ನ ಬಾಯಿಗೆ ತುರುಕಿರುತ್ತಾರೆ. ನಂತರ ನನ್ನನ್ನು ತುಳಿದಿರುತ್ತಾರೆ. ನನ್ನುನ್ನು ಮಕಾಡೆಯಾಗಿ ಮಲಗಿಸಿ , ಒಬ್ಬ ಆಸಾಮಿ (1 ಆರೋಪಿ) ನನ್ನ ಮೇಲೆ ನಿಂತು ಕೊಂಡನು. 1 ಮತ್ತು 3 ನೇ ಆರೋಪಿ ನನಗೆ ಕೂಗಾಡಿದರೆ ಸಾಯಿಸುವುದಾಗಿ ಹೆದರಿಸಿರುತ್ತಾರೆ. 1 ನೇ ಆರೋಪಿ ನನ್ನ ಬೆನ್ನ ಮೇಲೆ ನಿಂತಾಗ ಉಳಿದ ಆರೋಪಿತರು ಅಂಗಡಿಯ ಶೋ ಕೇಸ್ ನಲ್ಲಿದ್ದ ಚಿನ್ನದ ಒಡವೆಗಳನ್ನು ತಮ್ಮ ಅಂಗಿಯ ಒಳಗಡೆ ಹಾಕಿಕೊಳ್ಳುತ್ತಿದ್ದರು. ಒಬ್ಬ ಅಸಾಮಿ (3 ನೇ ಆರೋಪಿ) ನನ್ನ ಅಂಗಡಿಯಲ್ಲ್ಲಿ ಒಂದು ಬ್ಯಾಗ್ ನಲ್ಲಿ ಅಲ್ಲಿ ಇದ್ದ , ಉಂಗುರ , ಡಾಲರ್ ಮತ್ತು ಇತರ

ಆಭರಣಗಳನ್ನು ಬ್ಯಾಗಿಗೆ ಹಾಕಿಕೊಳ್ಳುತ್ತಿದ್ದನು. ನಾನು ಮಕಾಡೆಯಾಗಿ ಮಲಗಿದ್ದಾಗ , ನನ್ನ ಕಟ್ಟಿದ್ದ ಕೈ ಗಳಿಂದ ಪ್ಯಾಂಟ್ ಜೇಬ್ ನಲ್ಲಿ ಇದ್ದ ಮೊಬೈಲ್ ನ್ನು ಹೊರಗಡೆ ತೆಗೆದು , ಫೋನ್ ಮಾಡುವ ಸಮಯದಲ್ಲಿ ಮೊಬೈಲ್‌ನ ಬೆಳಕು ಕಂಡು, ನನ್ನ ಮೊಬೈಲ್ ನ್ನು ಕಿತ್ತುಕೊಂಡರು. ಅವರು ಅಗಂಡಿಯಲ್ಲಿದ್ದ ಚಿನ್ನವನ್ನು ದೋಚುತ್ತಿದ್ದರು. ಆಗ ಒಬ್ಬ 'ಹಿಸ್ ಕೋ ಮಾರ್ ದೋ' ಎಂದು ಹೇಳುತ್ತಿದ್ದನು. ನಾನು ಅವರಿಗೆ ಬಿಟ್ಟು ಬಿಡಿ ಎಂದು ಕೇಳಿಕೊಳುತ್ತಿದ್ದೆನು.

7. ನಂತರ ನನಗೆ ಆಯಾಸವಾಗಿ ನಾನು ಅಲ್ಲಿಯೇ ಬಿದ್ದಿದ್ದೆ. ಅವರು ಅಂಗಡಿಯಲ್ಲಿದ್ದ ಎಲ್ಲ ಚಿನ್ನದ ಒಡವೆಗಳನ್ನು ಮತ್ತು ಗಲ್ಲೆಯಲ್ಲಿದ್ದ ಸುಮಾರು 1,80,000/- ರೂ. ದೋಚಿಕೊಂಡಿರುತ್ತಾರೆ. ಆಗ ನನ್ನ ಚಿಕ್ಕಪ್ಪ ಮನೆಯಿಂದ ನನ್ನ ಅಂಗಡಿಗೆ ಬಂದು ಅಂಗಡಿಯ ಹೊರಗಡೆಯಿಂದ ನನಗೆ ಕೂಗಿರುತ್ತಾರೆ. ಆಗ ಸದರಿ ಆಸಾಮಿಗಳು ಅಂಗಡಿಯ ಶಟರ್ ನ್ನು ಎತ್ತಿ ಒಬ್ಬೊಬ್ಬರಾಗಿ ಹೊರಗಡೆ ಹೋಗಲು ಪ್ರಾರಂಭಿಸಿರುತ್ತಾರೆ. ಅಷ್ಟರಲ್ಲಿ ಅಂಗಡಿಯ ಹೊರಗಡೆಯಿಂದ ಒಂದು ಜೋರಾದ ಶಬ್ದ ಕೇಳಿ ಬಂತು. ಆಗ ನಾನು ಕೌಂಟರ್ ನ ಹೊರಗಡೆ ಬರಲು ಚಿಕ್ಕ ಬಾಗಿಲು ಇದ್ದು , ಅದರ ಮೂಲಕ ನಾನು ತೆವಳಿಕೊಂಡು ಹೊರಗಡೆ ಬಂದೆನು. ಆಗ ನನ್ನ ಚಿಕ್ಕಪ್ಪ ಅಲ್ಲಿ ರಾಜು ಎಂದು ನನ್ನ ತಮ್ಮನನ್ನು ಕೂಗುತ್ತಿದ್ದರು. ನಂತರ ನನ್ನ ಅಂಗಡಿಯ ಎದುರಗಡೆ ಇದ್ದ ನನ್ನ ತಮ್ಮನ ಅಂಗಡಿಯಿಂದ ನನ್ನ ತಾಯಿ ಮತ್ತು ನನ್ನ ತಮ್ಮ ಹೊರಗಡೆ ಬಂದರು. ನನ್ನ ಚಿಕ್ಕಪ್ಪ ಮತ್ತು ನನ್ನ ತಾಯಿ ನನ್ನ ಕೈ ಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿರುತ್ತಾರೆ.

8. ನಾನು ಹೊರಗಡೆ ಬಂದು ನೋಡಿದಾಗ ಅಂಗಡಿಯ ಮುಂದೆ ಇರುವ ಫುಟ್ ಬಾತ್ ಮೇಲೆ ಒಬ್ಬ ವ್ಯಕ್ತಿ ಬಿದ್ದಿರುವುದು ಕಂಡು ಬಂದಿತು. ನಂತರ ಅರ್ಧ ಗಂಟೆಯ ಬಳಿಕ

ಪೊಲೀಸರು ಅಲ್ಲಿಗೆ ಬಂದರು. ಆಗ ಸುಮಾರು 06.00 ಗಂಟೆಯಾಗಿರಬಹುದು. ನಂತರ ಪೋಲೀಸರು ಅಲ್ಲಿಗೆ ಬಂದು ಪರಿಶೀಲನೆ ಮಾಡು ಪ್ರಾರಂಬಿಸಿದರು. ಆಗ ನನಗೆ ಬಾಯಿಯಲ್ಲಿ ಬಟ್ಟೆ ಹಾಕಿ ನಾಲಿಗೆಗೆ ಗಾಯವಾದ ಕಾರಣ ಏನನ್ನು ಹೇಳಲು ಆಗುತ್ತಿರಲಿಲ್ಲ. ನಂತರ ನನ್ನನ್ನು ನನ್ನ ತಮ್ಮ ನನ್ನ ಅಣ್ಣ ರಾಮಕೃಷ್ಣ ಆಸ್ಪತ್ರೆಗೆ ಕರೆದುಕೊಂಡು ಹೋದರು. ನನ್ನನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಂಡರು. ನನಗೆ ಚಿಕಿತ್ಸೆ ನೀಡಿದ ನಂತರ ಪೊಲೀಸರು ಆಸ್ಪತ್ರೆಗೆ ಬಂದರು. ಅಲ್ಲಿಗೆ ಬಂದು ನನ್ನನ್ನು ವಿಚಾರಣೆ ಮಾಡಿ , ನಡೆದ ಘಟನೆಯ ಬಗ್ಗೆ ನಾನು ಅವರಿಗೆ ಹೇಳಿರುತ್ತೇನೆ.

9. ನನ್ನ ಹೇಳಿಕೆಯನ್ನು ಪೊಲೀಸರು ಬರವಣಿಗೆ ಮಾಡಿಕೊಂಡಿರುತ್ತಾರೆ. ನಾನು ಅದಕ್ಕೆ ಸಹಿ ಮಾಡಿರುತೇನೆ ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು , ಸದರಿ ದಾಖಲೆಯು ದೂರಾಗಿದ್ದು ಅದನ್ನು ನಿಪಿ.16 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 16(ಎ) ಎಂದು ಗುರುತಿಸಲಾಯಿತು.

10. ನಾನು 2-3 ದಿನ ಆಸ್ಪತ್ರೆಯಲ್ಲಿ ದಾಖಲು ಇದ್ದೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ದಿ.24.08.2021 ರಲ್ಲಿ ಪೋಲೀಸರು ಮತ್ತೊಮ್ಮೆ ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಘಟನೆ ನಡೆದ ದಿನ ನನಗೆ ಪೂರ್ಣ ವಿವರವನ್ನು ಹೇಳಲು ಆಗಿರಲಿಲ್ಲ. 24 ನೇ ತಾರಿಖಿಂದು ನಾನು ಘಟನೆಯ ಬಗ್ಗೆ ಮತ್ತು ದೋಚಿಕೊಂಡು ಹೋದ ಆಭರಣದ ಬಗ್ಗೆ ಹೇಳಿರುತ್ತೇನೆ. ನಾನು ಒಟ್ಟು 2.250 ಕೆಜಿ ಚಿನ್ನ , ನಗದು ಸುಮಾರು 1,80,000/- ರೂ. ದೋಚಲಾಗಿದೆ ಎಂದು ತಿಳಿಸಿರುತ್ತೇನೆ.

11. ನಾನು ದಿನಾಂಕ 25 ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದಿದ್ದು, ಅದೇ ದಿನ ಸಂಜೆ ಪೋಲೀಸರು ನಮ್ಮ ಮನೆಗೆ ಬಂದು, ನನ್ನನ್ನು ವಿಚಾರಿಸಿ ನಾನು ಘಟನೆ ದಿನ

ಧರಿಸಿದ ಬಟ್ಟೆಗಳ ಬಗ್ಗೆ ಕೇಳಿದಾಗ, ನಾನು ಅವರಿಗೆ ಸದರಿ ಬಟ್ಟೆಗಳನ್ನು ನೀಡಿರುತ್ತೇನೆ. ಸದರಿ ಬಟ್ಟೆಗಳನ್ನು ಪಡೆದುಕೊಂಡು, ಪ್ಯಾಕ್ ಮಾಡಿಕೊಂಡರು. ಪೋಲೀಸರ ಜೊತೆ ಅವರ ಜೊತೆ ಇನ್ನಿಬ್ಬರು ಬಂದಿದ್ದರು. ಪೊಲಿಸೀರು ಅಲ್ಲಿ ಸಹಿ ಪಡೆದುಕೊಂಡರು. ಅಷ್ಟಾಗಿ ನನಗೆ ನೆನಪಿರುವುದಿಲ್ಲ ಮತ್ತು ಸ್ಥಳದಲ್ಲಿ ಪೋಟೋಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ.17 ಎಂದು, ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಪೋಟೊಗಳನ್ನು ತೋರಿಸಿ ಗುರುತಿಸಲು ಕೇಳಿದಾಗ ಅವುಗಳನ್ನು ಗುರುತಿಸಿದ್ದು, ಒಟ್ಟಾರೆಯಾಗಿ ಸದರಿ ಪೋಟೋಗಳನ್ನು ನಿಪಿ.18 ಎಂದು ಗುರುತಿಸಲಾಯಿತು.

12. ಪೋಲೀಸರಿಗೆ ನೀಡಿದ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು, ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ನೀಲಿ ಬಣ್ಣದ ತುಂಬು ತೋಳಿನ ಶರ್ಟ್ ಎಂಓ-15 ಎಂದು, ಒಂದು ಮಾಸಲು ಬಣ್ಣದ ಪ್ಯಾಂಟ್ ಎಂಓ-16 ಎಂದು ಗುರುತಿಸಲಾಯಿತು.

13. ನಂತರ ದಿ.13.09.2021 ರಂದು ನನ್ನನ್ನು ನ್ಯಾಯಾಲಯದ ಮುಂದೆ ಕರಸಿದ್ದು, ಅಲ್ಲಿ ನನ್ನ ರಕ್ತವನ್ನು ಪಡೆದುಕೊಂಡರು. ನಂತರ 10-15 ದಿನಗಳ ಬಳಿಕ ಮತ್ತೆ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಹಾಜರಾಗಿ, ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯೂ ಕಲಂ 164 ಸಿ ಆರ್ ಪಿ ಸಿ ಅಡಿಯ ಹೇಳಿಕೆಯನ್ನು ನೋಡಿ

ಗುರುತಿಸಿದ್ದು , ಸದರಿ ದಾಖಲೆಯನ್ನು ನಿಪಿ.19 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 19(ಎ) ರಿಂದ (ಡಿ) ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ, ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**